ಸಾಕ್ಷಿಯನ್ನು ದಿನಾಂಕ:09.02.2021. ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ- 2 ಮತ್ತು 3ನೇ ಪ್ರತಿವಾದಿಯರ ಪರ ಶ್ರೀ ವಿ.ಆರ್. ವಕೀಲರಿಂದ.

ನನ್ನ ಸ್ವಂತ ಊರು ಚನ್ನಪಟ್ಟಣ ತಾಲ್ಲೂಕಿನ ಮಳೂರು ಹೋಬಳಿಯ ಬೆಳಕೆರೆ ಗ್ರಾಮ. ನನಗೆ ಹುಲಿಯೂರುದುರ್ಗದಲ್ಲಿ ಯಾವುದೇ ವ್ಯವಸಾಯದ ಜಮೀನು ಇಲ್ಲ ಎಂದರೆ ಸರಿ. ಹುಲಿಯೂರುದುರ್ಗದ ವ್ಯಾಪ್ತಿಯಲ್ಲಿ ನನಗೆ ಯಾವುದೇ ವ್ಯವಹಾರ ಅಥವಾ ಉದ್ಯೋಗವಿಲ್ಲ ಎಂದರೆ ಸರಿ. ಹುಲಿಯೂರುದುರ್ಗದಲ್ಲಿ ನನಗೆ ನೆಂಟರು ಅಥವಾ ಪರಿಚಯಸ್ಥರು ಇರುತ್ತಾರೆ. ಅವರೆಂದರೆ ನಂಜುಂಡಣ್ಣ, ಪ್ರಕಾಶ, ದೇವರಾಜ, ಸುರೇಶ ಪರಿಚಯಸ್ಥರು ಇರುತ್ತಾರೆ. 1ನೇ ಪ್ರತಿವಾದಿ ನನ್ನ ಸ್ನೇಹಿತನ ಕಡೆಯಿಂದ ನನಗೆ ಪರಿಚಯವಾಗಿರುತ್ತಾರೆ. 1ನೇ ಪ್ರತಿವಾದಿಯ ತಮ್ಮ ನಾಗರಾಜ ಹಾಲಿ ಜೀವಂತವಾಗಿದ್ದಾರೆ ಎಂದರೆ ಸರಿ. ಪ್ರತಿವಾದಿ ಹೆಚ್‌ಎಲ್ 96/1 ಕ್ರಮ ಸಂಖ್ಯೆ 77/1ಕ್ಕೆ ಸಂಬಂಧಿಸಿದಂತೆ ಕರಾರು ಬರೆದುಕೊಟ್ಟಿರುತ್ತಾರೆ. ಅದರ ಚಕ್ಕುಬಂದಿ ಪೂರ್ವಕ್ಕೆ-ಟಿ.ಎಂ. ರಸ್ತೆ, ಪಶ್ಚಿಮಕ್ಕೆ-ಸರ್ಕಾರಿ ಗಲ್ಲಿ ಮತ್ತು ಕೆ.ಜಿ ಕೃಷ್ಣರವರ ಸ್ವತ್ತು, ಉತ್ತರಕ್ಕೆ ಶ್ರೀನಿವಾಸ್ ರಾವ್ ರವರ ಸ್ವತ್ತು, ದಕ್ಷಿಣಕ್ಕೆ ಕೆ.ಜಿ ಕೃಷ್ಣರವರ ಸ್ವತ್ತು. ದಾವಾ ಸ್ವತ್ತು ಮೂಲತಃ 1ನೇ ಪ್ರತಿವಾದಿಯ ಚಿಕ್ಕಪ್ಪನಿಗೆ ಸೇರಿತ್ತು. ಸದರಿ ಸ್ವತ್ತು 1ನೇ ಪ್ರತಿವಾದಿಗೆ ಅವರ ಚಿಕ್ಕಪ್ಪನಿಗೆ ಯಾವುದೇ ಮಕ್ಕಳು ಇಲ್ಲದ ಕಾರಣ ಪ್ರಾಪ್ತವಾಗಿರುತ್ತದೆ. 1ನೇ ಪ್ರತಿವಾದಿಯ ತಂದೆಗೆ ಇಬ್ಬರೂ ಗಂಡು ಮಕ್ಕಳು ಆದರೆ ಎಷ್ಟು ಜನ ಹೆಣ್ಣು ಮಕ್ಕಳು ನನಗೆ ತಿಳಿದಿಲ್ಲ. 1ನೇ ಪ್ರತಿವಾದಿಗೆ 6 ಜನ ಸಹೋದರಿಯರು ಇರುತ್ತಾರೆ. ಅವರು ವಿಭಾಗ ಕೋರಿ 237/2016ರಂತೆ ದಾವೆ ಸಹ ಮಾಡಿರುವ ವಿಚಾರ ನನಗೆ ತಿಳಿದಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ವಿಭಾಗದ ದಾವೆ ಡಿಕ್ರಿಯಾಗಿ ಅಂತಿಮ ಡಿಕ್ರಿ ಸಹ ಪಡೆಯಲಾಗಿರುತ್ತದೆ ಎಂದರೆ ನನಗೆ ಮಾಹಿತಿ ಇಲ್ಲ. 1ನೇ ಪ್ರತಿವಾದಿಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಇರಲಿಲ್ಲ ಮತ್ತು ನನಗೆ ಯಾವುದೇ ಕರಾರು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. 2 ಮತ್ತು 3ನೇ ಪ್ರತಿವಾದಿಗಳ ತಂದೆ ನಾಗರಾಜು 1ನೇ ಪ್ರತಿವಾದಿಗೆ ಯಾವುದೇ ಅಧಿಕಾರ ಪತ್ರ ನೀಡಿರಲಿಲ್ಲ ಮತ್ತು ಮಾರಾಟ ಮಾಡಲು ಸೂಚಿಸಿರಲಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ನಾಗರಾಜು ಬರೆದುಕೊಟ್ಟಿರುವ ಅಧಿಕಾರ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಯಾವುದೇ ಅಧಿಕಾರ ಪತ್ರ ಬರೆದುಕೊಟ್ಟಿಲ್ಲ ನಾನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಛಾಪಾ ಕಾಗದವನ್ನು ಬ್ಯಾಂಕಿನಿಂದ ಖರೀದಿಸಿದ್ದೇನೆ ಹಾಲಿ ಬ್ಯಾಂಕ್‌ನ ಹೆಸರು ನನಗೆ ನೆನಪಿಲ್ಲ. ಛಾಪಾ ಕಾಗದವನ್ನು ದಿಃ22/08/2009 ರಂದು ಖರೀದಿಸಿದ್ದೇನೆ. ಛಾಪಾ ಕಾಗದ 200 ರೂ. ಮೌಲ್ಯದಾಗಿರುತ್ತದೆ. ಕರಾರನ್ನು ಹುಲಿಯೂರುದುರ್ಗದಲ್ಲಿ ಮಾಡಿಸಿರುತ್ತೇನೆ. ಕರಾರನ್ನು ಬರೆದವರ ಹೆಸರು ಈಗ ನನಗೆ ತಿಳಿದಿಲ್ಲ. ಕರಾರು ಪತ್ರಕ್ಕೆ ನಾನು, 1ನೇ ಪ್ರತಿವಾದಿ ಮತ್ತು

ಇಬ್ಬರು ಸಾಕ್ಷಿದಾರರು ಸಹಿ ಮಾಡಿದ್ದೇವೆ. ಸಾಕ್ಷಿದಾರರು ಶ್ರೀನಿವಾಸ್ ಮತ್ತು ಪ್ರಕಾಶ್ ಇರುತ್ತಾರೆ. ನಿಪಿ-5(ಎ) ಮತ್ತು ನಿಪಿ5(ಸಿ) ಸಹಿಗಳಲ್ಲಿ ವ್ಯತ್ಯಾಸವಿದೆ ಎಂದರೆ ಅದನ್ನು 1ನೇ ಪ್ರತಿವಾದಿ ಮಾಡಿದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ. ದಾವಾ ಸ್ವತ್ತು 2 ಮತ್ತು 3ನೇ ಪ್ರತಿವಾದಿಯರಿಗೆ ಕುಟುಂಬದಲ್ಲಿ ಪ್ರಾಪ್ತವಾದ ಸ್ವತ್ತು ಎಂದರೆ ಸರಿಯಲ್ಲ. ನಾನು ಮತ್ತು 1ನೇ ಪ್ರತಿವಾದಿ ಸುಳ್ಳು ಕರಾರು ಪತ್ರ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. 2 ಮತ್ತು 3ನೇ ಪ್ರತಿವಾದಿಯರಿಗೆ ನಾನು ಸೃಷ್ಟಿ ಮಾಡಿಕೊಂಡ ಕರಾರು ಯಾವುದೇ ಬಾದ್ಯತೆವುಂಟು ಮಾಡುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ
ಕುಣಿಗಲ್.